ಬೆವಿಕಂ
BESCOM


# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-2, ಸಂಚಿಕೆ-4 | ತ್ರೈಮಾಸಿಕ, ಅಕ್ಟೋಬರ್-ಡಿಸೆಂಬರ್ 2015 | ಪುಟಗಳು-12

## ಬೆಳಕು ಬಂದು ಬೆಂಗಳೂರಿಗೆ 110 ವರ್ಷ...







- ಸೋಲಾರ್ ಮೇಲ್ಛಾವಣಿ – ಮತ್ತೊಂದು ಮೈಲಿಗಲ್ಲು
- ಬೆಸ್ಕಾಂಗೆ ಬೆಳ್ಳಿ ಪದಕ
- ವಿದ್ಯುತ್ ಸರಬರಾಜಿಗಾಗಿ ವಿತರಣ ಲೈಸೆನ್ಸ್‌ದಾರರ ಷರತ್ತುಗಳು

ಇನ್ನೂ ಹಲವು ವಿಷಯಗಳೊಂದಿಗೆ.....

ಆ. 27ರಂದು ವಿಧಾನಸೌಧದ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಕೆಲ ಚಿತ್ರಗಳು. ಕೇಂದ್ರ ಸಚಿವರೊಡನೆ ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ಇಂಧನ ಇಲಾಖೆಯ ಹಲವು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.














# ವ್ಯವಸ್ಥಾಪಕ ನಿರ್ದೇಶಕರ ಸಂದೇಶ



**ಪಂಕಜ್‌ಕುಮಾರ್ ಪಾಂಡೆ**
ವ್ಯವಸ್ಥಾಪಕ ನಿರ್ದೇಶಕರು

ಆತ್ಮೀಯ ಸಹೋದ್ಯೋಗಿಗಳೇ,

ಇತ್ತೀಚಿನ ವರ್ಷಗಳಲ್ಲಿ ಕಂಡರಿಯದಂತಹ ಬರಗಾಲ ಪರಿಸ್ಥಿತಿ ರಾಜ್ಯದಲ್ಲಿ ತಲೆದೋರಿರುವುದು ವಿದ್ಯುತ್ ಉತ್ಪಾದನೆಯಲ್ಲಿ ತೀವ್ರ ಸ್ವರೂಪದ ಅಭಾವಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಹಲವು ಮೂಲಗಳಿದ್ದರೂ ಗ್ರಾಹಕರ ಬೇಡಿಕೆಗೆ ತಕ್ಕಂತೆ ಉತ್ಪಾದನೆ ಆಗದಿರುವುದು ವಿದ್ಯುತ್ ಅಭಾವಕ್ಕೆ ಕಾರಣವಾಗಿದೆ. ಸೌರಶಕ್ತಿ, ಥರ್ಮಲ್ ಘಟಕ, ಗಾಳಿಗಿರಣಿ, ಜಲವಿದ್ಯುತ್ ಮತ್ತಿತರ ಮೂಲಗಳಿಂದ ವಿದ್ಯುತ್ ಅನ್ನು ಉತ್ಪಾದನೆ ಮಾಡಲಾಗುತ್ತದೆ.

ಮಳೆಗಾಲದಲ್ಲಿ ಸಹಜವಾಗಿಯೇ ಜಲಾಶಯಗಳಿಂದ ಉತ್ಪತ್ತಿಯಾಗುವ ವಿದ್ಯುತನ್ನೇ ಅವಲಂಬಿಸಲಾಗುತ್ತದೆ. ಹೀಗಾಗಿ ಮಳೆಗಾಲದ ಆಸುಪಾಸಿನಲ್ಲಿ ರಾಯಚೂರಿನ ಥರ್ಮಲ್, ಉಡುಪಿಯ ವಿದ್ಯುತ್ ಘಟಕ ಮತ್ತಿತರ ಉತ್ಪಾದನಾ ಕೇಂದ್ರಗಳಲ್ಲಿ ವಾರ್ಷಿಕ ದುರಸ್ತಿ ಕಾರ್ಯಕ್ಕೆ ಆದ್ಯತೆ ನೀಡಲಾಗುತ್ತದೆ. ಆದರೆ ಈ ಬಾರಿ ಮಳೆಯಿಲ್ಲದೆ ಜಲವಿದ್ಯುತ್ ಕೇಂದ್ರಗಳಿಂದ ಅತ್ಯಂತ ಕಡಿಮೆ ಪ್ರಮಾಣದ ವಿದ್ಯುತ್ ಸರಬರಾಜಾಗಿದೆ. ಇದೇ ಸಮಯಕ್ಕೆ ಸರಿಯಾಗಿ ಇತರೆ ಘಟಕಗಳಿಂದ ವಿದ್ಯುತ್ ಉತ್ಪಾದನೆ ಕುಂಠಿತವಾಗಿತ್ತು. ಇದರ ಪರಿಣಾಮವಾಗಿ ಬೆಸ್ಕಾಂಗೆ 900 ಮೆಗಾವಾಟ್ ವಿದ್ಯುತ್ ಕೊರತೆ ಎದುರಾಗಿತ್ತು.

ದೀರ್ಘಾವಧಿಯ ಲೋಡ್‌ಶೆಡ್ಡಿಂಗ್ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು, ಸಿಬ್ಬಂದಿಗಳು ನಿರಂತರವಾಗಿ ಶ್ರಮಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದು ಪ್ರಶಂಸನೀಯ. ಈ ವರ್ಷ ನಮ್ಮೆಲ್ಲರಿಗೂ ಪರೀಕ್ಷೆಯ ಕಾಲ. ಚಳಿಗಾಲ ಕಳೆದು ನಾವಿನ್ನು ಬೇಸಿಗೆಯನ್ನು ನಿಭಾಯಿಸಬೇಕಿದೆ. ಇಂಥ ಸಂದರ್ಭದಲ್ಲಿ ಗ್ರಾಹಕರಿಂದ ಟೀಕೆಗಳು ಬರುವುದು ಸಹಜ. ಗ್ರಾಹಕರಿಗೆ ಪರಿಸ್ಥಿತಿಯನ್ನು ವಿವರಿಸಿ, ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿಕೊಳ್ಳಲು ಮನವೊಲಿಸಿ. ಸೌರಶಕ್ತಿ ಮೇಲ್ಛಾವಣಿಯಿಂದ ವಿದ್ಯುತ್ ಸ್ವಾವಲಂಬನೆ ಸಾಧ್ಯವೆಂಬುದನ್ನು ಮನವರಿಕೆ ಮಾಡಿಸಿ.

ಮಳೆಯ ಅಭಾವದಿಂದಾಗಿ ಈ ವರ್ಷ ವಿದ್ಯುತ್ ಕಡಿತವನ್ನು ಜಾರಿಗೊಳಿಸುವುದು ಅನಿವಾರ್ಯವಾಗಿದೆ. ಇಂಥ ಸಂದರ್ಭದಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಪರಿಸ್ಥಿತಿಯನ್ನು ನಿರ್ವಹಿಸಬೇಕಿದೆ. ನಾವೆಲ್ಲರೂ ಕರ್ತವ್ಯಪ್ರಜ್ಞೆಯಿಂದ ಒಂದು ಕುಟುಂಬದಂತೆ ಕೆಲಸ ಮಾಡೋಣ, ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿರ್ವಹಿಸೋಣ ಎನ್ನುವುದು ನನ್ನ ಆಶಯವಾಗಿದೆ.

ವಂದನೆಗಳು.

# ಸಂಪಾದಕೀಯ...



ಆತ್ಮೀಯರೇ,

ಈ ಬಾರಿಯ ಮುಂಗಾರು ಮಳೆ ನಮ್ಮ ನಿರೀಕ್ಷೆಯನ್ನು ಹುಸಿಮಾಡಿದೆ. ವಾಡಿಕೆಯ ಮಳೆಗಾಲ ಇರುತ್ತದೆ ಎಂದು ಹವಾಮಾನ ಇಲಾಖೆ ಹೇಳಿದ್ದರೂ ರಾಜ್ಯಾದ್ಯಂತ ಮಳೆಯ ತೀವ್ರ ಕೊರತೆ ಎದ್ದು ಕಾಣುತ್ತಿದೆ.

ಮಳೆಯಿಲ್ಲದೆ ಬಹುತೇಕ ಜಲಾಶಯಗಳಲ್ಲಿ ನೀರಿನ ಮಟ್ಟ ತಳಕ್ಕೆ ಹೋಗಿದೆ. ಜಲಾಶಯಗಳಲ್ಲಿ ನೀರಿನ ಕೊರತೆ ಉಂಟಾದರೆ ಸಹಜವಾಗಿಯೇ ಜಲವಿದ್ಯುತ್ ಉತ್ಪಾದನೆ ಪ್ರಮಾಣ ಕುಸಿಯುತ್ತದೆ.

ನಿಗದಿತ ಪ್ರಮಾಣದಲ್ಲಿ ವಿದ್ಯುತ್ ಸಜಬರಾಜು ಸಾಧ್ಯವಾಗದ ಕಾರಣ ಬೆಸ್ಕಾಂ ವ್ಯಾಪ್ತಿಯಲ್ಲಷ್ಟೇ ಅಲ್ಲದೆ ರಾಜ್ಯಾದ್ಯಂತ ವಿದ್ಯುತ್ ಕಡಿತ ಅನಿವಾರ್ಯವಾಗಿದೆ. ಲಭ್ಯವಿರುವ ವಿದ್ಯುತ್ ಹಾಗೂ ಗ್ರಾಹಕರ ಬೇಡಿಕೆ ಅನುಸರಿಸಿ ನಿಲುಗಡೆಯನ್ನು ಯೋಜಿಸಬೇಕಾಗುತ್ತದೆ. ಇದೊಂದು ಅನಿವಾರ್ಯ ಕ್ರಮವಾಗಿದ್ದು ಸಾರ್ವಜನಿಕರೂ ಕೂಡ ಸಹಕರಿಸಬೇಕಾಗಿದೆ.

ದಿನನಿತ್ಯ ಗ್ರಾಹಕರ ಜೊತೆ ನೇರ ಸಂಪರ್ಕ ಹೊಂದಿರುವ ನಮ್ಮ ಸಹೋದ್ಯೋಗಿಗಳು/ ಇಂಜಿನಿಯರುಗಳು ಈ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವುದು ಅವಶ್ಯವಾಗಿದೆ. ಅದೇ ರೀತಿ ಬಂದ ದೂರುಗಳನ್ನು ಸ್ವೀಕರಿಸಿ ನಮ್ಮ ಮಟ್ಟದಲ್ಲಿ ಅವುಗಳನ್ನು ಬಗೆಹರಿಸಲು ಪ್ರಯತ್ನಿಸುವುದು ನಮ್ಮ ಕರ್ತವ್ಯವಾಗಿದೆ.

ಈ ಸಂದರ್ಭದಲ್ಲಿ ವಿದ್ಯುತ್ ಮಿತಬಳಕೆ ಸೂತ್ರವನ್ನು ನಾವೆಲ್ಲರೂ ಅನುಸರಿಸಿ ಉಳಿತಾಯದತ್ತ ಗಮನ ಹರಿಸಬೇಕಾಗಿದೆ. ಅನಗತ್ಯವಾಗಿ ದೀಪಗಳನ್ನು ಉರಿಸುವುದು, ಫ್ಯಾನ್‌ಗಳನ್ನು ನಿರಂತರವಾಗಿ ಚಾಲನೆಯಲ್ಲಿಡುವುದು ಮಾಡದೆ ಕಚೇರಿ ಮತ್ತು ಮನೆಗಳಲ್ಲಿ ಈ ಬಗ್ಗೆ ನಿಗಾ ವಹಿಸಬೇಕು. ಅಲ್ಲದೆ ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ನಮ್ಮ ಜವಾಬ್ದಾರಿ.

ಮುಂಬರುವ ದಸರಾ, ದೀಪಾವಳಿ ಹಾಗೂ ಹೊಸ ವರ್ಷಕ್ಕೆ ನಿಮ್ಮೆಲ್ಲರಿಗೂ ಹಾರ್ದಿಕ ಶುಭಾಶಯಗಳು.

ವಂದನೆಗಳೊಂದಿಗೆ,

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ & ಸಂ), ಬೆಸ್ಕಾಂ



**H.Nagesh**
Director (Technical)

At present BESCOM is reeling under power crisis. This kind of scenario was experienced during the years 2000 to 2004 where energy entitlement was introduced station wise to ease the situation.

Now the similar scenario is repeating after the gap of 15 years. But all our engineers are striving hard to bring the situation under control by implementing systematic load shedding all across BESCOM, by intimating the clear schedule to the consumers.

The situation is likely to improve shortly if once the technical snags of generators are rectified by KPC and Private Power Producers such as UPCL, BTPS and RTPS.

It is unfortunate that the Rain God did not cooperate this year. However, it is beyond our control. Hence Hydro generation has been reduced to 50% compared to last year.

KPTCL has to synchronize their operations with that of DCC of BESCOM for proper load management and to avoid erratic load shedding to avoid public criticism.

The Mega projects such as DAS and RAPDRP-Part A/B has to be completed at the earliest, so as to focus our attention on most prestigious Centrally Sponsored Schemes of IPDS and DDUGJY, which mainly covers, strengthening of network, AMR for feeders and household electrification, etc.

The team work will definitely ensure success in our endeavors in creating architecture for safe, reliable, efficient and green grid.

# ಸೋಲಾರ್ ರೂಫ್‌ಟಾಪ್ ವಿದ್ಯುತ್ ಉತ್ಪಾದನೆಯಲ್ಲಿ ಮತ್ತೊಂದು ಮೈಲಿಗಲ್ಲು

ತಮ್ಮೆಲ್ಲರಿಗೂ ತಿಳಿದಿರುವಂತೆ ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು 2014ರ ನವೆಂಬರ್ 7ರಂದು ಬೆಸ್ಕಾಂನ ಕೇಂದ್ರ ಕಚೇರಿಯಲ್ಲಿ ಸೌರಶಕ್ತಿ ಮೇಲ್ಛಾವಣಿ ಫೋಟೋವೋಲ್ಟಿಕ್ ವ್ಯವಸ್ಥೆಗೆ ಚಾಲನೆ ನೀಡಿದ್ದರು. ಜಾರಿಯಾದ ಕೇವಲ 9 ತಿಂಗಳ ಅವಧಿಯಲ್ಲಿ 100 ಮಂದಿ ಗ್ರಾಹಕರನ್ನು ಹೊಂದಿದ ಖ್ಯಾತಿ ಬೆಸ್ಕಾಂಗೆ ಲಭಿಸಿದೆ.



ನವೀಕರಿಸಬಹುದಾದ ಇಂದನಗಳ ಪಟ್ಟಿಯಲ್ಲಿ ಸೌರಶಕ್ತಿ ವಿದ್ಯುತ್ ಹೆಚ್ಚು ಜನಪ್ರಿಯ. ನಿಮ್ಮ ಮನೆಗೆ ನಿಮ್ಮದೇ ವಿದ್ಯುತ್ ಎಂಬ ಕಲ್ಪನೆಯಡಿ ರಾಜ್ಯ ಇಂಧನ ಇಲಾಖೆ 'ಸೌರಶಕ್ತಿ ಮೇಲ್ಛಾವಣಿ ಫೋಟೋವೋಲ್ಟಿಕ್ ವ್ಯವಸ್ಥೆಯನ್ನು' ಜಾರಿಗೆ ತಂದಿದೆ. ಈ ಯೋಜನೆ ಅಡಿ ಗ್ರಾಹಕರು ತಮ್ಮ ಮನೆಗೆ ಬೇಕಿರುವ ವಿದ್ಯುತನ್ನು ತಾವೇ ಉತ್ಪಾದಿಸಬಹುದು. ಮನೆಗೆ ಬಳಸಿದ ನಂತರ ಉಳಿಯುವ ವಿದ್ಯುತನ್ನು ಸರ್ಕಾರಕ್ಕೆ ಮಾರಾಟಮಾಡಿ ಹಣ ಕೂಡ ಗಳಿಸಬಹುದು. ರಾಜ್ಯದ ಎಲ್ಲೆಡೆ ಜಾರಿಯಿರುವ ಈ ಯೋಜನೆಯಲ್ಲಿ ಕೇವಲ ಕೆಲವೇ ತಿಂಗಳಿನಲ್ಲಿ 1 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಮೂಲಕ ಬೆಸ್ಕಾಂ ಸಾಧನೆಗೈದಿತ್ತು. ಈಗ ಸೌರಶಕ್ತಿ ಮೇಲ್ಛಾವಣಿ ಫೋಟೋವೋಲ್ಟಿಕ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಗ್ರಾಹಕರಿಗೆ ತಲುಪಿಸಿರುವ ಬೆಸ್ಕಾಂ ಕಡಿಮೆ ಅವಧಿಯಲ್ಲಿ 100 ಗಾಹಕರನ್ನು ಹೊಂದಿರುವ ಹಿರಿಮೆಗೆ ಒಳಪಟ್ಟಿದೆ.

ಕೆ.ಎಸ್.ಸಿ.ಎ 400 ಕಿ.ವ್ಯಾ, ಸೆಂಟ್ ಜೋಸೆಫ್ ಕಾಲೇಜು 100,ಕಿ.ವ್ಯಾ, ನ್ಯಾಷನಲ್ ಇನಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸೈನ್ಸ್ 100,ಕಿ.ವ್ಯಾ ಹಾಗೂ ಡಾ. ಡಿ.ವಿ. ಮಂಜುನಾಥ 300ಕಿ.ವ್ಯಾ ಸೌರಶಕ್ತಿ ವಿದ್ಯುತ್ ಉತ್ಪಾದಿಸುವ ಕೇಲ ಪ್ರಮುಖ ಗ್ರಾಹಕರು. ಬೆಸ್ಕಾಂ ಕೂಡ ತನ್ನ ಕೇಂದ್ರ ಕಚೇರಿಯ ಮೇಲ್ಛಾವಣಿಯಲ್ಲಿ 50 ಕಿ.ವ್ಯಾಟ್‌ನಷ್ಟು ಸೌರಶಕ್ತಿ ವಿದ್ಯುತ್ ಉತ್ಪಾದಿಸುತ್ತದೆ. ನಿಮ್ಮ ವಿಭಾಗ-ಉಪ ವಿಭಾಗಗಳ ಗ್ರಾಹಕರಗೆ ಸೌರಶಕ್ತಿ ವಿದ್ಯುತ್ ಉತ್ಪಾದಿಸುವ ಕುರಿತು ಮಾಹಿತಿ ನೀಡಿ ಸೌರಶಕ್ತಿ ಬಳಕೆಯನ್ನು ಪ್ರೋತ್ಸಾಹಿಸಿ.

**ಗ್ರಾಹಕರು ಸೋಲಾರ್ ಮೇಲ್ಛಾವಣಿ ಅಳವಡಿಸಿಕೊಳ್ಳಲು ಆಸಕ್ತಿ ತೋರಿದಲ್ಲಿ ಸೋಲಾರ್ ಹೆಲ್ಪ್ ಡೆಸ್ಕ್ ನಂ. 080–22340816 ಸಂಪರ್ಕಿಸಲು ಮಾಹಿತಿ ನೀಡಿ.**

# ಬೆಂಗಳೂರಿಗೆ ಬೆಳಕು-110ರ ಸಂಭ್ರಮ


ಸೂರ್ಯೋದಯದಿಂದ ಸೂರ್ಯಾಸ್ಥದವರೆಗೂ, ಮನೆ ಕೆಲಸದಿಂದ ಕಚೇರಿ, ಕಾರ್ಖಾನೆಗಳವರೆಗೂ ವಿದ್ಯುತ್ ಇಲ್ಲದೆ ಯಾವ ಕೆಲಸ ಕಾರ್ಯವೂ ಪೂರ್ತಿಯಾಗುವುದಿಲ್ಲ ಅನ್ನೊದು ನಿಮಗೆ ಗೊತ್ತೇ ಇದೆ. ಹೀಗೆ ನಿತ್ಯ ಜೀವನದ ಅವಿಭಾಜ್ಯ ಅಂಗವಾಗಿರುವ ವಿದ್ಯುತ್, ಬೆಂಗಳೂರಿಗೆ ಬಂದು 2015ರ ಅಗಸ್ಟ್ 5ಕ್ಕೆ 110 ವರ್ಷಗಳು ಪೂರೈಸಿವೆ.

ಬೆಂಗಳೂರಿಗೆ ವಿದ್ಯುತ್ ಸಂಪರ್ಕ ಬಂದ ಕಥೆಯೇ ಆಸಕ್ತಿಕರ. ಅಂದು ಉತ್ಪಾದಿಸಲಾಗುತ್ತಿದ್ದ ವಿದ್ಯುತ್ ಸಂಪೂರ್ಣವಾಗಿ ಬಳಕೆಯಾಗುತ್ತಿದ್ದದು ಕೋಲಾರದ ಚಿನ್ನದ ಗಣಿಗಳಿಗೆ. ಉತ್ಪಾದನೆಯ ಎರಡನೇ ಹಂತದ ವಿಸ್ತರಣೆಯಾದಾಗ ಚಿನ್ನದ ಗಣಿಗಳಿಗೆ ಅಗತ್ಯವಿರುವುದಕ್ಕಿಂತ ಹೆಚ್ಚಿನ ಪ್ರಮಾಣದ ವಿದ್ಯುತ್ ಲಭ್ಯವಾಗಲಾರಂಭಿಸಿತು. ಈ ಸಂದರ್ಭದಲ್ಲಿ ಅಂದಿನ ಮೈಸೂರು ಸರ್ಕಾರದ ಉಪ ಮುಖ್ಯ ಇಂಜಿನಿಯರ್ ಆಗಿದ್ದ ಎ.ಸಿ.ಜೆ ಲಾಬಿನರ್‌ರವರು ಸರ್ಕಾರದ ಆರ್ಥಿಕ ತಜ್ಞರಿಗೆ ಪ್ರಸ್ತಾವವೊಂದನ್ನು



ಸಲ್ಲಿಸಿದರು. ಈ ಪ್ರಸ್ತಾವದಲ್ಲಿ ಬೆಂಗಳೂರಿನ ಸಾರ್ವಜನಿಕರು ವಿದ್ಯುಚ್ಛಕ್ತಿ ಪಡೆಯಲು ತೀವ್ರ ಆಸಕ್ತರಾಗಿದ್ದು ಚಿನ್ನದ ಗಣಿಗಳಿಗೆ ಬಳಸಿದ ನಂತರ ಉಳಿಯುವ ವಿದ್ಯುತನ್ನು ಬೆಂಗಳೂರಿಗೆ ನೀಡಲು ಮನವಿ ಮಾಡಲಾಗಿತ್ತು. ಎ.ಸಿ.ಜೆ ಲಾಬಿನರ್‌ರವರು ಎಷ್ಟೊಂದು ಚಾಣಾಕ್ಷತನದಿಂದ ಈ ಪ್ರಸ್ತಾವ ಸಲ್ಲಿಸಿದ್ದರೆಂದರೆ ಚಿನ್ನದ ಗಣಿಗಳು ಬಹುಕಾಲ ಬದುಕಲಾರವು. ಹೀಗಾಗಿ ಬೆಂಗಳೂರಿಗೆ ವಿದ್ಯುತ್ ಬಂದರೆ ಕೈಗಾರಿಕೆಗಳು ಆರಂಭಗೊಳ್ಳುತ್ತವೆ, ಇದರಿಂದ ಸರ್ಕಾರಕ್ಕೆ ನೇರವಾಗಿ ಲಾಭವಾಗುತ್ತದೆ ಎಂದಿದ್ದರು. ಈ ಪ್ರಸ್ತಾವನೆಗೆ ಮೈಸೂರು ಮಹಾರಾಜರು 1904 ಮೇ 30ರಂದು ಮಂಜೂರಾತಿ ನೀಡಿದರು.

ಬೆಂಗಳೂರಿಗೆ ವಿದ್ಯುತ್ ಒದಗಿಸಲೆಂದು 35,000 ವೋಲ್ಟ್‌ನ 57 ಮೈಲುದ್ದದ ಏಕಮಾರ್ಗವನ್ನು ಶಿವನಸಮುದ್ರದಿಂದ ನಿರ್ಮಿಸಲಾಯಿತು. ಅಂದಿನಕಾಲಕ್ಕೆ ಈ ಯೋಜನೆಗೆ ತಗುಲಿದ ವೆಚ್ಚ 7,46,000 ರೂಪಾಯಿಗಳು.



### ಭಾರತದಲ್ಲಿ ವಿದ್ಯುತ್

**ಧುಮುಕುವ ನೀರಿನ ಶಕ್ತಿಯನ್ನು ಯಾಂತ್ರಿಕ ಶಕ್ತಿಯಾಗಿ ಭಾರತದಲ್ಲಿ ಬಳಕೆಗೆ ತಂದ ಪ್ರಥಮ ಸ್ಥಳ ಗೋಕಾಕ ಜಲಪಾತ. 1886ರಲ್ಲಿ ಬ್ರಿಟಿಷ್ ಒಡೆತನದ ಹತ್ತಿ ಗಿರಣಿ ಯಂತ್ರಗಳನ್ನು ನಡೆಸಲೆಂದು ಘಟಪ್ರಭ ನದಿಯ ಗೋಕಾಕ ಜಲಪಾತಕ್ಕೆ ನೀರ್ಗಾಲಿಗಳನ್ನು ಅಳವಡಿಸಿ ಅದರ ಯಾಂತ್ರಿಕ ಶಕ್ತಿಯನ್ನುಗಿರಣಿಗೆ ವರ್ಗಾಯಿಸಲಾಗುತ್ತಿತ್ತು. ಇದು ಭಾರತದಲ್ಲಿ ಜಲ ವಿದ್ಯುತ್ ಬಳಸಿದ ಪ್ರಪ್ರಥಮ ಪ್ರಯೋಗ.**

ಬೆಂಗಳೂರಿನ ಕೋಟೆಯ ಸಮೀಪ 'ಎಂ' ಸ್ಥಾವರ ಎಂಬ ಹೆಸರಿನಲ್ಲಿ (ಇದನ್ನೆ 'ಎ' ಸ್ಟೇಷನ್ ಎಂದೂ ಕರೆಯುತ್ತಿದ್ದರು) ಅಗತ್ಯ ಕಟ್ಟಡ ನಿರ್ಮಿಸಲಾಯಿತು. ಈ ಪ್ರಸರಣ ಮಾರ್ಗಕ್ಕೆ ಕೆ.ಜಿ.ಎಫ್‌ನಂತೆ ಮರದ ಕಂಬಗಳನ್ನು ಬಳಸದೆ ಉಕ್ಕಿನ ಕಂಬಗಳನ್ನು ಬಳಸಿದ್ದು ವಿಶೇಷವಾಗಿತ್ತು. ಹೀಗೆ 1905ರ ಅಗಸ್ಟ್ 5ರಂದು ಬೆಂಗಳೂರಿಗೆ ಬೆಳಕು ಬಂದಿತು.

ಭಾರತದಲ್ಲಿ ಜಲವಿದ್ಯುತ್ ಪಡೆದ ಪ್ರಮುಖ ನಗರಗಳಲ್ಲಿ ಮೊದಲನೆಯದು ಎಂಬ ಖ್ಯಾತಿ ಬೆಂಗಳೂರಿನದು. ಮೂಗಿಗಿಂತ ಮೂಗುತಿ ಭಾರ ಎನ್ನುವ ಹಾಗೆ ವಿದ್ಯುತ್ ಸಂಪರ್ಕ ನೀಡಿದ ಮೊದಲ ವರ್ಷ ತಗುಲಿದ ವೆಚ್ಚ 5,86,120 ರೂಪಾಯಿಗಳಾದರೆ ಬಂದ ಆದಾಯ ಮಾತ್ರ ಕೇವಲ 36,476 ರೂಪಾಯಿಗಳು.

ವಿದ್ಯುತ್ ಬರುವ ಮೊದಲು ಬೀದಿದೀಪಗಳು ಇರಲಿಲ್ಲವೇ ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಬಹುದು. ದಾಖಲೆಗಳ ಪ್ರಕಾರ 1905ರ ಹೊತ್ತಿಗೆ ಬೆಂಗಳೂರಿನಲ್ಲಿ ಸೀಮೆ ಎಣ್ಣೆಯ ಲಾಂದ್ರ ಕಂಬಗಳಿದ್ದವು. ಪ್ರತಿದಿನ ಸಂಜೆ ಈ ದೀಪಗಳನ್ನು ಉರಿಸಲೆಂದೇ ಇಬ್ಬರನ್ನು ನೇಮಿಸಲಾಗಿತ್ತು. ಒಬ್ಬ ಮುಂದೆ ಮುಂದೆ ದೀಪಗಳಿಗೆ ಎಣ್ಣೆ ಹಾಕುತ್ತ ಸಾಗಿದರೆ ಮತ್ತೊಬ್ಬ ಹಿಂದಿನಿಂದ ದೀಪ ಬೆಳಗಿಸುತ್ತ ಬರುತ್ತಿದ್ದ. ಈ ಲಾಂದ್ರದೀಪಗಳ ನಿರ್ವಹಣೆಗಾಗಿ ವಾರ್ಷಿಕ 12000

*ಮುಂದಿನ ಪುಟಕ್ಕೆ....*

# ಬೆಸ್ಕಾಂಗೆ ಬೆಳ್ಳಿ ಪದಕ

ಅಖಿಲ ಭಾರತ ಎಲೆಕ್ಟ್ರಿಸಿಟಿ ಬೋರ್ಡ್ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸುವ ಮೂಲಕ ಬೆಸ್ಕಾಂನ ಜೂನಿಯರ್ ಇಂಜಿನಿಯರ್ ಎಮ್. ಅನಂತಕುಮಾರ್ ಸಂಸ್ಥೆಯ ಹಿರಿಮೆಗೆ ಪಾತ್ರರಾಗಿದ್ದಾರೆ. ಅಗಸ್ಟ್ 2015ರಂದು ಚಂಡೀಗಢದ



ಪಂಚಕುಲಾದಲ್ಲಿ ಅಖಿಲ ಭಾರತ ಎಲೆಕ್ಟ್ರಿಸಿಟಿ ಬೋರ್ಡ್ ದೇಹದಾರ್ಢ್ಯ ಸ್ಪರ್ಧೆ ಆಯೋಜಿಸಿತ್ತು. ಈ ಸ್ಪರ್ಧೆಯಲ್ಲಿ ದೇಶದ ಎಲ್ಲಾ ರಾಜ್ಯಗಳ ಅಭ್ಯರ್ಥಿಗಳು ಪಾಲ್ಗೊಂಡಿದ್ದರು. ಮೊದಲ ಸುತ್ತಿನಲ್ಲಿ ಆಯ್ಕೆಯಾದ 12 ಜನರಲ್ಲಿ ಎಮ್. ಅನಂತ ಕುಮಾರ್ ಸ್ಥಾನ ಗಿಟ್ಟಿಸಿ ಕೊಂಡಿದ್ದರು. ಅಂತಿಮ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನಗಳಿಸಿದ ಅನಂತಕುಮಾರ್ ಬೆಳ್ಳಿ ಪದಕಗಳಿಸಿದ್ದಾರೆ.



ಉತ್ತರವಲಯದ ಎನ್ 6 ಉಪವಿಭಾಗದಲ್ಲಿ ಜೂನಿಯರ್ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಅನಂತಕುಮಾರ್ ಅದೆಷ್ಟೇ ಕೆಲಸಗಳಿದ್ದರೂ ದಿನಕ್ಕೆ ಮೂರು ಘಂಟೆಯಂತೆ ದೈಹಿಕ ಕಸರತ್ತು ಮಾಡುತ್ತಾರೆ. 2009, 2010, ಹಾಗೂ 2011ರಲ್ಲಿ ಸತತ ಮೂರು ಬಾರಿ ಮಿಸ್ಟರ್ ಬೆಂಗಳೂರು ಪ್ರಶಸ್ತಿ ಪಡೆದಿರುವ ಇವರಿಗೆ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಗೆಲ್ಲುವ ಮಹದಾಸೆ.

*....ಹಿಂದಿನ ಪುಟದಿಂದ*

ರೂಪಾಯಿಗಳನ್ನು ವ್ಯಯಿಸಲಾಗುತ್ತಿತ್ತು.

1905 ರಲ್ಲಿ ಬೆಂಗಳೂರಿಗೆ ವಿದ್ಯುತ್ ದೀಪ ಬಂದಿದ್ದೇನೋ ಸರಿ ಆದರೆ ಅದರ ಬೆಲೆ ಮಾತ್ರ ತುಂಬಾ ದುಬಾರಿಯಾಗಿತ್ತು. ನಮ್ಮ ಇಂದಿನ ಟ್ಯೂಬ್‌ಲೈಟ್ ಅಥವಾ 40 ವ್ಯಾಟಿನ ಬಲ್ಬ್‌ಗೆ ಅಂದು ತಿಂಗಳೊಂದಕ್ಕೆ ಒಂದು ರೂಪಾಯಿ ಎರಡು ಆಣೆ ವ್ಯಯವಾಗುತ್ತಿತ್ತು. ಆಗ ಬೆಲೆಗಳನ್ನು ಪ್ರತಿ ದೀಪಕ್ಕೆ ಒಂದು ತಿಂಗಳಿಗಿಷ್ಟರಂತೆ ನಿಗದಿಸಲಾಗಿತ್ತು. ದೀಪ ಉರಿಸಿ ಅಥವಾ ಬಿಡಿ ಬೆಲೆ ಮಾತ್ರ ಒಂದು ರೂಪಾಯಿ ಎರಡು ಆಣೆ. 1905ರ ಕೊನೆಯ ಹೊತ್ತಿಗೆ ಬೆಂಗಳೂರಿನಲ್ಲಿ 1395 ಬೀದಿ ದೀಪಗಳನ್ನು ಅಳವಡಿಸಲಾಗಿತ್ತು.



### ಶಾಕ್ ಹೊಡೆಸಿಕೊಳ್ಳಲು ಪೈಪೋಟಿ

**ವಿದ್ಯುತ್ ಶಕ್ತಿಯ ಬಳಸುವಾಗ ಎಚ್ಚರವಾಗಿರಿ ಸ್ವಲ್ಪ ಮೈಮರೆತರು ಅಪಾಯ ಅಂಥ ನಾವು ಸಾರ್ವಜನಿಕರಿಗೆ ಎಚ್ಚರಿಕೆ ಮಾಹಿತಿ ನೀಡುತ್ತಲೇ ಇರುತ್ತೇವೆ. ಆದರೆ ನಿಮಗೆ ಗೊತ್ತಾ... 17ನೇ ಶತಮಾನದಲ್ಲಿ ಜಾಡಿಯಲ್ಲಿ ಶೇಖರಿಸಲಾಗುತ್ತಿದ್ದ ಕಡಿಮೆ ಸಾಮರ್ಥ್ಯದ ವಿದ್ಯುತ್ ಶಾಕ್ ಹೊಡೆಸಿಕೊಳ್ಳುವುದಕ್ಕೆ ಜನ ನಾಮುಂದು ತಾಮುಂದು ಎಂದು ಪೈಪೋಟಿ ನಡೆಸುತ್ತಿದ್ದರು. ಫ್ರಾನ್ಸ್‌ನ ರಾಜಧಾನಿ ಪ್ಯಾರಿಸ್‌ನಲ್ಲಿ ಏಳು ನೂರು ಜನ ಪರ್ಷಿಯನ್ ಧರ್ಮಗುರುಗಳು ಪರಸ್ಪರ ಕೈಹಿಡಿದು ನಿಂತು ಕಡಿಮೆ ಸಾಮರ್ಥ್ಯದ ವಿದ್ಯುತ್ ಸ್ಪರ್ಶದ ಚುಂಬಕ ಅನುಭವ ಪಡೆದು ಘಟನೆ ಇತಿಹಾಸದಲ್ಲಿ ದಾಖಲಾಗಿದೆ. ಅಂದು ಜನರು ಮನೋರಂಜನೆಗಾಗಿ ಶಾಕ್ ಹೊಡೆಸಿಕೊಳ್ಳುತ್ತಿದ್ದರಂತೆ.**

ಇದು ಬೆಂಗಳೂರಿಗೆ ಬೆಳಕು ಹರಿದುಬಂದ ಕಥೆ. ಅಂದು ಕೇವಲ ಶ್ರೀಮಂತರ ಪಾಲಿಗೆ ಮಾತ್ರ ಲಭ್ಯವಿದ್ದ ವಿದ್ಯುತ್ ಇಂದು ನಮ್ಮೆಲ್ಲರ ನಿತ್ಯದ ಬದುಕಿನ ಅವಿಭಾಜ್ಯ ಅಂಗ. ನಮ್ಮ ಮುಂದಿನ ಪೀಳಿಗೆಗೆ ಕೇವಲ ಈ ಕಥೆಯೊಂದನ್ನ ಮಾತ್ರ ಬಿಡದೆ ವಿದ್ಯುತನ್ನು ಕೊಡುಗೆಯಾಗಿ ಕೊಡೋಣ. ವಿದ್ಯುತನ್ನು ಮಿತವಾಗಿ ಬಳಸೋಣ.

(**ಮಾಹಿತಿ ಕೃಪೆ–** ಶ್ರೀ ಗಜಾನನ ಶರ್ಮಾರವರ ಪುಸ್ತಕ "ಬೆಳಕಾಯಿತು ಕರ್ನಾಟಕ")

# ಶ್ರೀ ರವಿ ರಾಮೇಶ್ವರ ಕ್ಷೇತ್ರ

ಮಹಾ ಮಹಿಮಾನ್ವಿತ ಗತವೈಭವದ 2500 ವರ್ಷಗಳ ಪರಂಪರೆಯ ಶ್ರೀ ರವಿ ರಾಮೇಶ್ವರ ಸ್ವಾಮಿ ಕ್ಷೇತ್ರವು ಕಪಿಲಾ ನದಿಯ ಪರ್ಯಾಯ ದ್ವೀಪವಾದ ಕಿತ್ತೂರಿನಲ್ಲಿದೆ. ಈ ಪುಣ್ಯಕ್ಷೇತ್ರವು ಪ್ರಕೃತಿಯ ಮಡಿಲಲ್ಲಿ ಕಂಗೊಳಿಸುತ್ತಿದೆ. ಈ ಕ್ಷೇತ್ರವು ಮೈಸೂರಿನಿಂದ ಹೆಗ್ಗಡದೇವನ ಕೋಟೆ (ಮಾನಂದವಾಡಿ) ರಸ್ತೆಯಲ್ಲಿ ಹ್ಯಾಂಡ್ ಪೋಸ್ಟ್ ಮೂಲಕ ಕಪಿಲಾ ಜಲಾಶಯದಿಂದ ಹಾಗೂ ಹೊಸ ಬಿದರಹಳ್ಳಿ ಮಾರ್ಗ ತರಣಿಮುಂಟೆ ಗ್ರಾಮದಿಂದ 2 ಕಿ.ಮೀ ದೂರದಲ್ಲಿದೆ. ಈ ಕ್ಷೇತ್ರವು ಮೈಸೂರಿನಿಂದ 70 ಕಿ.ಮೀ. ದೂರವಿರುತ್ತದೆ.





ಶ್ರೀ ಕ್ಷೇತ್ರವು ಪಾರ್ವತಾಂಬ, ಬಲಮುರಿ ಮಹಾಗಣಪತಿ, ಕಾರ್ತಿಕೇಯ ಸುಬ್ರಮಣ್ಯ, ರಂಗನಾಯಕಿ ಸಮೇತ ಬಿಳಿಗಿರಿ ರಂಗನಾಥ, ಶ್ರೀ ಆಂಜನೇಯ ಸ್ವಾಮಿ, ಅಯ್ಯಪ್ಪಸ್ವಾಮಿ, ಶ್ರೀ ಶಂಕರ ಭಗವತ್ಪಾದ, ದಕ್ಷಿಣಾ ಮೂರ್ತಿ, ಚಂಡಿಕೇಶ್ವರ, ನಾಗದೇವತೆ, ಸುಬ್ರಮಣ್ಯೇಶ್ವರ, ಮಹಾನಂದಿ, ಸಪತ್ನೀತ ಸಮೇತ ಆದಿತ್ಯಾದಿ ನವಗ್ರಹ ವಿಗ್ರಹಗಳನ್ನೆಲ್ಲಾ ಒಳಗೊಂಡಿದೆ. ಪರ್ಯಾಯ ದ್ವೀಪವನ್ನು ನೋಡಲು ವಿಹಂಗಮ ನೋಟ ವ್ಯವಸ್ಥಿತ ಹಾಗೂ ಎತ್ತರವಾದ ಮಹಡಿಯನ್ನು ನಿರ್ಮಿಸಲಾಗಿದೆ. ಶ್ರೀ ಕ್ಷೇತ್ರದಲ್ಲಿ ಸರ್ವದೋಷ ಪಾಪ ಪರಿಹಾರಕ್ಕಾಗಿ ಸಂಕಲ್ಪಿತ ಕಪಿಲಾ ಪುಣ್ಯ ಸ್ನಾನದ ವ್ಯವಸ್ಥೆ ಇದೆ. ಈ ಕ್ಷೇತ್ರದಲ್ಲಿ ಗರುಡ ಹಾಗೂ ನವಿಲುಗಳ ದರ್ಶನವೂ ಆಗುತ್ತದೆ.

### ಸ್ಥಳ ಮಹಿಮೆ:

ಕೇರಳದ ಗಡಿ ಭಾಗವಾಗಿ ದಂಡಕಾರಣ್ಯವೆನಿಸಿದ್ದು ರವಿ ವಂಶಸ್ಥ ಶ್ರೀ ರಾಮ, ಶಿವನ ಪೂಜೆ ಮಾಡಿದ ಸ್ಥಳವಾಗಿ ರವಿರಾಮೇಶ್ವರ ಕ್ಷೇತ್ರವೆನಿಸಿದೆ. ಚತುಷ್ಪಾದಿ ಪೀಠದಲ್ಲಿ ಸಾಲಿಗ್ರಾಮ ಕೃಷ್ಣ ಶಿಲೆಯಿಂದ ಮೂರೂವರೆ ಅಡಿ ಎತ್ತರದ ರಾಮಬಾಣದ ಗುರುತಿರುವ ಲಿಂಗ ರೂಪಿಯಾದ ಶ್ರೀ ರವಿ ರಾಮೇಶ್ವರ ಸ್ವಾಮಿಯು ಕಂಗೊಳಿಸುತ್ತಿದ್ದಾರೆ. ದೇವಾಲಯದ ಮುಂಭಾಗದಲ್ಲಿ ಬಿಲ್ವ ಪತ್ರೆ ವೃಕ್ಷ ಹಾಗೂ ಆ ಕಾಲದ ಶಿಲಾಶಾಸನವು ಇದೆ. ಇತ್ತೀಚಿನ ದಿನಗಳಲ್ಲಿ ಕಿತ್ತೂರು ಬಳಗ ಹಾಗೂ ರವಿ ರಾಮೇಶ್ವರ ಸೇವಾ ಸಮಿತಿಯವರು ಈ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಮಾಡಿದ್ದಾರೆ.

ಈ ಬೃಹದಾಕಾರದ ಲಿಂಗ ಮೂರ್ತಿಯನ್ನು ಸ್ಥಾನ ಪಲ್ಲಟವಾಗದ ರೀತಿಯಲ್ಲಿ ಉಳಿಸಿಕೊಳ್ಳಲು ಈ ಕ್ಷೇತ್ರದಲ್ಲಿ ದೊಡ್ಡ ನಾಗಸರ್ಪ ವಾಸವಿದೆ ಎಂಬುದು ಕ್ಷೇತ್ರದ ಮಹಿಮೆಗಳಲ್ಲೊಂದು.



ಪ್ರತಿ ಹುಣ್ಣಿಮೆಯ ದಿನ ರುದ್ರಾಭಿಷೇಕ, ಸತ್ಯನಾರಾಯಣ ಪೂಜೆ, ಅನ್ನದಾನ ನಡೆಸಲಾಗುತ್ತಿದೆ.

### ಕಪಿಲಾ ನದಿ ವಿಶೇಷ:

ಕೇರಳ ರಾಜ್ಯದ ವಯನಾಡು ಪ್ರಾಂತ್ಯದ ಒಡಬಂಡೇಶ್ವರ ಗುಹೆಯಿಂದ ಉಗಮವಾಗಿ ಕಪಿಲಾ ನದಿಯು ಹರಿದು ಬಂದು ಕರ್ನಾಟಕದ ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆಗೆ ಪ್ರವೇಶ ಮಾಡಿ ಶ್ರೀ ಕ್ಷೇತ್ರವನ್ನು ಹೂಮಾಲೆಯಂತೆ ಪರ್ಯಾಯ ದ್ವೀಪವಾಗಿಸಿ ಸಂತೆ ಸರಗೂರು ಮೂಲಕ ದಕ್ಷಿಣ ಕಾಶಿ ಎನಿಸಿರುವ ನಂಜನಗೂಡು ಶ್ರೀಶ್ರೀಕಂಠೇಶ್ವರ ಕ್ಷೇತ್ರದಲ್ಲಿ ಹರಿದು ಶ್ರೀ ಗುಂಜಾ ನರಸಿಂಹ ಸ್ವಾಮಿ ಕ್ಷೇತ್ರದಲ್ಲಿರುವ ತಿರುಮಕೂಡಲು ನರಸೀಪುರದ ಬಳಿ ಕಾವೇರಿ ನದಿಗೆ ಸಂಗಮವಾಗಿ ನಂತರ ತಮಿಳುನಾಡು, ತಂಜಾವೂರಿಗೆ ಹರಿಯುವ ಪವಿತ್ರವಾದ ಔಷಧಿಯ ಗುಣವಿರುವ ಕಪಿಲಾನದಿಯ ಸ್ನಾನವು ಪ್ರಖ್ಯಾತವಾದದ್ದು ಇದಲ್ಲದೆ ಬೆಂಗಳೂರು ಮಹಾನಗರ ಹಾಗೂ ಮೈಸೂರು ನಗರಗಳಿಗೆ ಕುಡಿಯುವ ನೀರನ್ನು ಪೂರೈಸುತ್ತಿದೆ.

ಶ್ರೀ ಕ್ಷೇತ್ರಕ್ಕೆ ಸಮೀಪದಲ್ಲಿ ಕಪಿಲಾ ನದಿಯ ದಂಡೆಯಲ್ಲಿ ಮಳಲಗದ್ದೆ ಶ್ರೀ ಹನುಮಂತರಾಯ ಸ್ವಾಮಿ ಕ್ಷೇತ್ರ ಹಾಗೂ ಕಿತ್ತೂರು ಗ್ರಾಮದೇವತೆ ಶ್ರೀ ಮಾಂಕಾಳಮ್ಮ ಕ್ಷೇತ್ರವೂ ಸಹ ಇರುತ್ತದೆ. ಶ್ರೀ ಕ್ಷೇತ್ರದಲ್ಲಿ ಒಂದೆರಡು ದಿನ ನೆಲೆಸಿ ದರ್ಶನ ಪಡೆಯಬಯಸುವ ಭಕ್ತರ ಅನುಕೂಲಕ್ಕಾಗಿ ಪ್ರಧಾನ ಅರ್ಚಕರ ಮನೆಯ ಮುಂಭಾಗದಲ್ಲೇ ಯಾತ್ರಿನಿವಾಸದ ವ್ಯವಸ್ಥೆಯಿರುತ್ತದೆ.

**–ಎ. ರಮೇಶ್**
ಉಪಪ್ರಧಾನ ವ್ಯವಸ್ಥಾಪಕರು (ಕಾ–1)
ಕಂಪನಿ ಕಾರ್ಯಾಲಯ, ಬೆವಿಕಂ,
ಬೆಂಗಳೂರು. ಮೊ. ನಂ 9449046580.

# ವಿದ್ಯುತ್ ಸರಬರಾಜಿಗೆ ವಿತರಣ ಲೈಸೆನ್ಸ್‌ದಾರರ ಷರತ್ತುಗಳು

> **ಹಳೆಯ ಆವೃತಿ:** ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಶಿವಮೊಗ್ಗ-ಭದ್ರಾವತಿ ನಗರ ಪಾಲಿಕೆ ಮಿತಿ ಹಾಗೂ ಆಯೋಗದ ಅನುಮೋದನೆಯೊಂದಿಗೆ ಲೈಸೆನ್ಸುದಾರರು ಕಾಲಕಾಲಕ್ಕೆ ಅಧಿಸೂಚಿಸುವ ಇತರ ಸ್ಥಳಗಳಲ್ಲಿ ವಿದ್ಯುತ್ ಸಂಪರ್ಕ ಸೇವಾ ಮಾರ್ಗವನ್ನು ಭೂಗತ ಕೇಬಲ್ ಮೂಲಕವೇ ಅಳವಡಿಸತಕ್ಕದ್ದು.

- ಕಲಮು 4.04(ಥ)ರಲ್ಲಿ ಸೂಚಿಸಿರುವ ಸ್ಥಳಗಳನ್ನು ಹೊರತುಪಡಿಸಿ, ಇತರೆ ಸ್ಥಳದಲ್ಲಿ ಭೂಗತ ಕೇಬಲ್ ವಿದ್ಯುತ್ ಸಂಪರ್ಕ ಸೇವಾ ಮಾರ್ಗವನ್ನು ಹೊಂದಬಯಸುವ ಅರ್ಜಿದಾರರು, ಆ ವಿದ್ಯುತ್ ಸಂಪರ್ಕ ಸೇವಾ ಮಾರ್ಗದ ಪೂರ್ಣ ವೆಚ್ಚವನ್ನು ಭರಿಸತಕ್ಕದ್ದು. ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಸೇವೆಯನ್ನು ಒದಗಿಸಿದ ನಂತರ ಆ ಮಾರ್ಗದಲ್ಲಿ ಯಾವುದೇ ಲೋಪದೋಷ ಕಂಡುಬಂದರೆ, ಗ್ರಾಹಕರು ಅವರ ವೆಚ್ಚದಲ್ಲಿ ಸರಿಪಡಿಸತಕ್ಕದ್ದು. ವಿದ್ಯುತ್ ಸಂಪರ್ಕ ಸೇವಾ ಮಾರ್ಗವನ್ನು ಸರಿಪಡಿಸಿದ ಸಂದರ್ಭದಲ್ಲಿ ಕಾರ್ಯವಿಮುಕ್ತಿಗೊಳಿಸಿದ ಯಾವುದೇ ಸಾಮಗ್ರಿಗಳನ್ನು ಗ್ರಾಹಕರೇ ಇರಿಸಿಕೊಳ್ಳಲು ಅನುಮತಿಸಲಾಗಿದೆ.

### 4.05 ವಿದ್ಯುತ್ ಸಂಪರ್ಕ ಸೇವಾ ಮಾರ್ಗ

- ಮೇಲ್ಮಾರ್ಗವಾಗಿರಲಿ ಅಥವಾ ಭೂಗತ ಮಾರ್ಗವಾಗಿರಲಿ, ವಿದ್ಯುತ್ ಸಂಪರ್ಕ ಸೇವಾ ಮಾರ್ಗ ನಿರ್ಮಾಣದ ನಿರ್ಧಾರವನ್ನು ಲೈಸೆನ್ಸುದಾರರೇ ತೆಗೆದುಕೊಳ್ಳತಕ್ಕದ್ದು ಮತ್ತು ಉಪಯೋಗಿಸುವ ಸಾಮಗ್ರಿಗಳ ಗುಣಮಟ್ಟವು ಭಾರತೀಯ ಗುಣಮಟ್ಟ ನಿರ್ದಿಷ್ಟತೆಗೆ ಅನುಗುಣವಾಗಿರತಕ್ಕದ್ದು.
- ಗ್ರಾಹಕರು ವಿದ್ಯುತ್ ಸಂಪರ್ಕ ಸೇವಾ ಮಾರ್ಗದ ವೆಚ್ಚವನ್ನು ಭರಿಸಿದ್ದರೂ ಸಹ, ನಿರ್ವಹಣೆಯ ಉದ್ದೇಶಕ್ಕಾಗಿ ವಿದ್ಯುತ್ ಸಂಪರ್ಕ ಸೇವಾ ಮಾರ್ಗವು ಲೈಸೆನ್ಸುದಾರರ ಆಸ್ತಿಯಾಗಿರುತ್ತದೆ. ಈ ಸೇವಾ ಮಾರ್ಗವನ್ನು ಯಾವುದೇ ವ್ಯಕ್ತಿಗೆ ವಿದ್ಯುತ್ ಸರಬರಾಜು ಮಾಡಲು ಲೈಸೆನ್ಸುದಾರರು ಹಕ್ಕುಳ್ಳವರಾಗಿದ್ದರೂ, ಅಂತಹ ಕ್ರಮದಿಂದ ಈಗಾಗಲೇ ಸದರಿ ಮಾರ್ಗದಿಂದ ವಿದ್ಯುತ್ ಸರಬರಾಜು ಪಡೆಯುತ್ತಿರುವ ಗ್ರಾಹಕ/ಗ್ರಾಹಕರಿಗೆ ಯಾವುದೇ ರೀತಿಯ ಹಾನಿ ಅಥವಾ ಕೆಡಕುಂಟಾಗಬಾರದು. ಆದರೆ, ಎಲ್.ಟಿ. ಇಂದ ಎಚ್.ಟಿ.ಗೆ ಮಾರ್ಪಾಡಾದಾಗ, ಎಲ್.ಟಿ. ಗ್ರಾಹಕರು ಅವರ ವೆಚ್ಚದಲ್ಲೇ ಸ್ಥಾಪಿಸಿರುವ ವಿತರಣ ಪರಿವರ್ತಕ ಮತ್ತು ಸಂಪರ್ಕಿತ ವಿದ್ಯುತ್ ಮಾರ್ಗವು ಅವರ ಸುಪರ್ದಿಯಲ್ಲಿರಲು ಅನುಮತಿಸತಕ್ಕದ್ದು.

### 4.06 ತಪಾಸಣೆ ಮತ್ತು ಪರೀಕ್ಷೆ

(ಎ) ಅರ್ಜಿದಾರ ಮತ್ತು ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ, ಅರ್ಜಿದಾರರ ಆವರಣದಲ್ಲಿನ ವೈರಿಂಗ್ ಕಾರ್ಯವು, ಕೇಂದ್ರೀಯ ವಿದ್ಯುತ್ ಪ್ರಾಧಿಕಾರವು, ವಿದ್ಯುಚ್ಛಕ್ತಿ ಕಾಯಿದೆ, 2003ರ ಪರಿಚ್ಛೇದ 53ರ ಅಡಿಯಲ್ಲಿ ಕಾಲದಿಂದ ಕಾಲಕ್ಕೆ ನಿಗದಿಪಡಿಸುವ ನಿಯಮಗಳಿಗೆ ಅನುಸಾರವಾಗಿ ಇರತಕ್ಕದ್ದು ಹಾಗೂ ವೈರಿಂಗ್ ಕಾರ್ಯವನ್ನು ಅರ್ಹ ವಿದ್ಯುತ್ ಪರವಾನಗಿ ಪಡೆದ ಗುತ್ತಿಗೆದಾರರಿಂದ ಮಾಡಿಸಿರತಕ್ಕದ್ದು. ಅರ್ಜಿದಾರರು, ಆ ವಿದ್ಯುತ್ ಗುತ್ತಿಗೆದಾರರು ನೀಡಿದ ಕಾರ್ಯಸಮಾಪನಾ ವರದಿ ಮತ್ತು ಸ್ಥಾಪನದ ಪರೀಕ್ಷಾ ವರದಿಯನ್ನು ಲೈಸೆನ್ಸುದಾರರಿಗೆ ಸಲ್ಲಿಸತಕ್ಕದ್ದು.

ಸ್ಥಾಪನದ ಸಾಮರ್ಥ್ಯ ಹಾಗೂ ಸ್ವರೂಪವನ್ನು ಬದಲಾಯಿಸದ ಲ್ಯಾಂಪು, ಫ್ಯಾನು, ಫ್ಯೂಸು, ಕಡಿಮೆ ವೋಲ್ಟೇಜಿನ ಗೃಹೋಪಕರಣಗಳು ಮತ್ತು ಜೋಡಣೆಗಳು, ಇಂತಹುಗಳ ದುರಸ್ತಿಯನ್ನು ಹೊರತುಪಡಿಸಿ, ಸ್ಥಾಪನಕ್ಕೆ ಸೇರ್ಪಡೆ, ಬದಲಾವಣೆ, ದುರಸ್ತಿ ಮತ್ತು ಹೊಂದಾಣಿಕೆ, ಇಂತಹ ಯಾವುದೇ ವಿದ್ಯುತ್ ಕೆಲಸಗಳನ್ನು ಯಾವುದೇ ಗ್ರಾಹಕನ ಪರವಾಗಿ ಅಥವಾ ಆವರಣದ ಮಾಲೀಕನ ಪರವಾಗಿ, ಸರ್ಕಾರದಿಂದ ವಿದ್ಯುತ್ ಪರವಾನಗಿ ಪಡೆದ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ ಮಾತ್ರ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಅಥವಾ ಅರ್ಹತೆಯ ಪ್ರಮಾಣ ಪತ್ರವನ್ನು ಪಡೆದ ವ್ಯಕ್ತಿಯ ನೇರ ಮೇಲ್ವಿಚಾರಣೆಯಲ್ಲಿ ನಡೆಸತಕ್ಕದ್ದೇ ಹೊರತು ಇನ್ನಾವುದೇ ವ್ಯಕ್ತಿಯಿಂದ ಈ ಕಾರ್ಯಗಳನ್ನು ನಡೆಸತಕ್ಕದ್ದಲ್ಲ. ಈ ನಿಯಮವನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರವು ರೂಪಿಸಿರುವ ನಿಯಮಗಳ ಅಡಿಯಲ್ಲಿ ದಂಡ ಸಹಿತ ಶಿಕ್ಷೆಗೆ ಗುರಿಯಾಗುತ್ತಾನೆ.

*ಮುಂದುವರಿಯುವುದು...*



## ನನ್ನ ಮುದ್ದು ಕಂದ

ನನ್ನ ಕಂದ ನಕ್ಕರೆ, ಸೂರ್ಯನು ತಂಪಾಗುವನು.
ನನ್ನ ಕಂದ ಅತ್ತರೆ, ಚಂದ್ರನು ಕೆಂಪಾಗುವನು.

ನನ್ನ ಕಂದನ ಮುಖಾರವಿಂದವು, ತುಂಬಾ ಅಂದವು,
ನನ್ನ ಕಂದನನ್ನು ಮುದ್ದಾಡಲು, ತುಂಬಾ ಚಂದವು.

ನನ್ನ ಕಂದನ ಕೂಡ ಕುಣಿಯಲು ನವಿಲುಗಳು ಕಾದಿವೆ.
ನನ್ನ ಕಂದನ ಸಂಗೀತ ಸ್ವರಮಾಲೆಯನ್ನು ಕೇಳಲು,
ಕೋಗಿಲೆಗಳು ಕುಳಿತಿವೆ.

ನನ್ನ ಕಂದನ ನುಡಿಮುತ್ತುಗಳನ್ನಾಯಲು
ನನಗೆ ಸಮಯದ ಅಭಾವ
ನನ್ನ ಕಂದನ ಆಟ-ಪಾಠಗಳನ್ನು ಬಣ್ಣಿಸಲು
ನನಗೆ ಪದಗಳ ಅಭಾವ

ನನ್ನ ಕಂದನ ಕೂಡ ಇರಲು, ಪ್ರಪಂಚವನ್ನೇ ಮರೆಸುವಳು,
ನನ್ನ ಕಂದನನ್ನು ಪಡೆದ ನಾನು, ಬಹಳ ಪುಣ್ಯವಂತಳು.

**-ಶ್ರೀಮತಿ ಹೆಚ್.ಪಿ.ಶೈಲ**
ಸಹಾಯಕಇಂಜಿನಿಯರ್(ವಿ) ಕಂಪನಿ ಕಾರ್ಯಾಲಯ, ಬೆ.ವಿ.ಕಂ

# ಜ್ಞಾನಪೀಠ ಪ್ರಶಸ್ತಿ

## ಗಿರೀಶ್ ಕಾರ್ನಾಡ್



ಕನ್ನಡಕ್ಕೆ ಏಳನೇ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟವರು ಗಿರೀಶ್ ಕಾರ್ನಾಡ್. ನಾಟಕ ಸಾಹಿತ್ಯ ರಚನೆಗೆ ಭಾರತದಲ್ಲೇ ಜ್ಞಾನಪೀಠ ಪ್ರಶಸ್ತಿ ಪಡೆದವರಲ್ಲಿ ಕಾರ್ನಾಡ್ ಮೊದಲಿಗರು. ಕನ್ನಡದಲ್ಲಿ ನಾಟಕ ರಚಿಸುತ್ತ ಇತರ ಭಾರತೀಯ ಭಾಷೆಗಳಲ್ಲಿ ಸಂಪರ್ಕವಿಟ್ಟುಕೊಂಡು ಸಾಂಸ್ಕೃತಿಕ ವಕ್ತಾರರಾದ ಕಾರ್ನಾಡ್, ನಟರಾಗಿ, ನಿರ್ದೇಶಕರಾಗಿ ಹೆಸರಾಗಿದ್ದಾರೆ. ಆರಂಭದಲ್ಲಿ ರಂಗಭೂಮಿ ನಟರಾಗಿದ್ದವರು ಹೊಸ ವಿಚಾರಗಳತ್ತ ಗಮನಹರಿಸಿ ನಾಟಕ ರಚನೆಗೆ ಚಿಂತಿಸಿದರು. ಹೀಗಾಗಿ ಪುರಾಣ, ಇತಿಹಾಸಗಳು ವಾಸ್ತವ ನೆಲೆಗಟ್ಟಿನಲ್ಲಿ ನೇಯಲ್ಪಟ್ಟವು.

ಗಿರೀಶ್ ಕಾರ್ನಾಡ್‌ರು 1938ನೇ ಮೇ 19ರಂದು ಮಹಾರಾಷ್ಟ್ರದ ಮಾಥೇರಾನದಲ್ಲಿ ಜನಿಸಿದರು.

'ಸಂಸ್ಕಾರ' ಚಲನಚಿತ್ರವು ಕನ್ನಡದ ಪ್ರಥಮ ಕಲಾತ್ಮಕ ಚಲನಚಿತ್ರ. ಇದರಲ್ಲಿ ಗಿರೀಶ್ ಕಾರ್ನಾಡರದು ಪ್ರಮುಖ ಪಾತ್ರ. ಇದು ಕನ್ನಡಕ್ಕೆ ಪ್ರಥಮ ಸ್ವರ್ಣಕಮಲವನ್ನು ತಂದು ಕೊಟ್ಟ ಚಿತ್ರ. ಆ ನಂತರ ಎಸ್.ಎಲ್. ಭೈರಪ್ಪನವರ 'ವಂಶವೃಕ್ಷ' ಕಾದಂಬರಿಯನ್ನು ಆಧರಿಸಿ ಬಿ.ವಿ. ಕಾರಂತರ ಜೊತೆಗೂಡಿ 'ವಂಶವೃಕ್ಷ' ಚಿತ್ರವನ್ನು ನಿರ್ದೇಶನ ಮಾಡಿದರು. ಇದು ಹಲವಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಪುರಸ್ಕಾರ ಪಡೆಯಿತು.

ರಾಷ್ಟ್ರಕವಿ ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಕಾದಂಬರಿಯನ್ನು ಆಧರಿಸಿ 'ಕಾನೂರು ಹೆಗ್ಗಡಿತಿ' ಚಿತ್ರವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರವು ರಾಜ್ಯ ಪ್ರಶಸ್ತಿ, ರಾಷ್ಟ್ರೀಯ ಪುರಸ್ಕಾರ ಪಡೆದು ಅಂತರರಾಷ್ಟ್ರೀಯ ಮಟ್ಟದಲ್ಲಿ ಪನೋರಮಕ್ಕೂ ಆಯ್ಕೆಯಾಯಿತು.

ಕಾರ್ನಾಡರಿಗೆ ಹಲವಾರು ಹುದ್ದೆಗಳು, ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ, ಜ್ಞಾನಪೀಠ, ಕಾಳಿದಾಸ ಸಮ್ಮಾನ್ ಮುಂತಾದ ಪ್ರಶಸ್ತಿಗಳು ಲಭಿಸಿವೆ. ತುಘಲಕ್, ಯಯಾತಿ, ನಾಗಮಂಡಲ, ಹಿಟ್ಟಿನ ಹುಂಜ ಕಾರ್ನಾಡರ ಹೆಸರಾಂತ ಕೃತಿಗಳು.

# ರಾಷ್ಟ್ರೀಯ ಹಬ್ಬಗಳು


**ಗಾಂಧಿ ಜಯಂತಿ (ಅಕ್ಟೋಬರ್ 2):** ಸತ್ಯ ಮತ್ತು ಅಹಿಂಸೆಯ ಮೂಲಕವೂ ಹೋರಾಟ ಸಾಧ್ಯ ಎಂಬುದನ್ನು ವಿಶ್ವಕ್ಕೆ ಮೊಟ್ಟಮೊದಲು ತೋರಿಸಿಕೊಟ್ಟ ಧೀಮಂತ ನಾಯಕ ಮೋಹನದಾಸ ಕರಮಚಂದ ಗಾಂಧಿ. 'ರಾಷ್ಟ್ರಪಿತ' ಎಂದೇ ಪರಿಚಿತರಾಗಿರುವ ಗಾಂಧೀಜಿಯ ಜನ್ಮದಿನವಾದ ಅಕ್ಟೋಬರ್ 2ನ್ನು ಗಾಂಧಿ ಜಯಂತಿ ಎಂದು ಆಚರಿಸಲಾಗುತ್ತಿದೆ.



ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ವಕೀಲರಾಗಿದ್ದಾಗ ಅಲ್ಲಿ ವಾಸವಾಗಿದ್ದ ಭಾರತೀಯ ಸಮುದಾಯವು ನಾಗರಿಕ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದ ಅವಧಿಯಲ್ಲಿ ಅಹಿಂಸಾತ್ಮಕ ನಾಗರಿಕ ಅವಿಧೇಯತೆಯ ಆಂದೋಲನವನ್ನು ಮೊದಲ ಬಾರಿಗೆ ಪ್ರಯೋಗಿಸಿದರು. 1921ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ನಾಯಕತ್ವ ವಹಿಸಿದ ಬಳಿಕ, ಬಡತನ ನಿವಾರಣೆ, ಮಹಿಳಾ ಹಕ್ಕುಗಳ ವಿಸ್ತರಣೆ, ಧಾರ್ಮಿಕ ಮತ್ತು ಜನಾಂಗೀಯ ಸೌಹಾರ್ದ, ಅಸ್ಪೃಶ್ಯತೆಯ ಅಂತ್ಯ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಹೆಚ್ಚಿಸಲು ಹಮ್ಮಿಕೊಳ್ಳಲಾದ ರಾಷ್ಟ್ರವ್ಯಾಪಿ ಚಳವಳಿಗಳ ನೇತೃತ್ವವನ್ನು ಗಾಂಧೀಜಿ ವಹಿಸಿಕೊಂಡರು.

ಬ್ರಿಟಿಷರು ಹೇರಿದ್ದ ಉಪ್ಪಿನ ತೆರಿಗೆಯನ್ನು ವಿರೋಧಿಸಲು ಹಮ್ಮಿಕೊಂಡಿದ್ದ ಅಸಹಕಾರ ಚಳವಳಿಯಲ್ಲಿ ತಮ್ಮ ಅನುಯಾಯಿಗಳ ಮುಂದಾಳತ್ವವನ್ನು ವಹಿಸಿದ್ದ ಗಾಂಧೀಜಿ, 1930ರಲ್ಲಿ ದಂಡಿ ಉಪ್ಪಿನ ಯಾತ್ರೆ ನಡೆಸಿದರು. ಅನಂತರ ಅವರು ಬ್ರಿಟಿಷರ ವಿರುದ್ಧ ಕ್ವಿಟ್ ಇಂಡಿಯಾ ಚಳವಳಿಯನ್ನು ನಡೆಸಿದರು. ಗಾಂಧಿಯವರು ದಕ್ಷಿಣಾ ಆಫ್ರಿಕಾ ಹಾಗೂ ಭಾರತದಲ್ಲಿ ಹಲವು ವರ್ಷಗಳ ಕಾಲ ಕಾರಾಗೃಹ ವಾಸದಲ್ಲಿದ್ದರು. ನಿರಾಡಂಬರವಾದ ಜೀವನ ನಡೆಸಿದ ಗಾಂಧಿಯವರು ಚರಕದ ಮೂಲಕ ತಾವೇ ತೆಗೆದ ನೂಲಿನಿಂದ ನೇಯ್ದ ಸಾಂಪ್ರದಾಯಿಕ ಭಾರತೀಯ ಧೋತಿ ಮತ್ತು ಶಾಲನ್ನು ಧರಿಸುತ್ತಿದ್ದರು. ಜನವರಿ 30, 1948 ನಾಥುರಾಮ ಗೋಡ್ಸೆಯಿಂದ ಹತ್ಯೆಗೆ ಒಳಗಾದರು. ಪ್ರತಿವರ್ಷ ಜನವರಿ 30 ಅನ್ನು ಹುತಾತ್ಮರ ದಿನವನ್ನಾಗಿ ಆಚರಿಸಲಾಗುತ್ತದೆ.

**ಆಯುಧ ಪೂಜೆ (ಅಕ್ಟೋಬರ್ 22):** ಆಶ್ವೀಜ ಶುದ್ಧ ಪ್ರತಿಪದೆಯಿಂದ ದಶಮಿಯವರೆಗೆ ಭಾರತದಾದ್ಯಂತ ಸಾಂಪ್ರದಾಯಿಕವಾಗಿ ಆಚರಿಸಲಾಗುವ ನವರಾತ್ರಿ ಮತ್ತು ವಿಜಯದಶಮಿ ಹಬ್ಬ ಹಿಂದೂಗಳಲ್ಲಿ ಕ್ರಿಯಾತ್ಮಕವಾಗಿ ಮಾತ್ರವಲ್ಲ, ಭಾವನಾತ್ಮಕವಾಗಿ ಭಾರೀ ಮಹತ್ವ ಪಡೆದಿದೆ. ಈ ಹತ್ತು ದಿನಗಳ ಸಂಭ್ರಮದ ದಸರಾ ಹಬ್ಬದ ದಿನಗಳಂದು ಬನಶಂಕರಿ, ಚಾಮುಂಡೇಶ್ವರಿ, ದುರ್ಗೆ, ಸರಸ್ವತಿ ಮುಂತಾದ ತಮ್ಮ ಇಷ್ಟದೇವತೆಗಳನ್ನು ಭಕ್ತಿಭಾವದಿಂದ ಪೂಜಿಸಲಾಗುತ್ತದೆ. ಒಂಬತ್ತು ದಿನಗಳಂದು ವಿವಿಧ ದೇವ ದೇವತೆಗಳನ್ನು ಸ್ತುತಿಸಲಾಗುತ್ತದೆ.



ನವರಾತ್ರಿಯ ಕೊನೆಯ ದಿನದ ಆಚರಣೆ ಮಹಾನವಮಿಯಂದು ಆಯುಧಪೂಜೆಗೆ ಹೆಚ್ಚಿನ ಮಹತ್ವ. ತರಕಾರಿ ಹೆಚ್ಚುವ ಚಾಕುವಿನಿಂದ ಹಿಡಿದು ದೇಶದ ರಕ್ಷಣೆಗಾಗಿ ಬಳಸಲಾಗುವ ಅತ್ಯಾಧುನಿಕ ಯುದ್ಧ ವಿಮಾನಗಳನ್ನು ಕೂಡ ಆಯುಧಪೂಜೆಯಂದು ಪೂಜಿಸಲಾಗುತ್ತದೆ. ದೇವಾನುದೇವತೆಗಳಿಗೆ ಕಾಟ ಕೊಡುತ್ತಿದ್ದ ಮಹಿಷಾಸುರನನ್ನು ಚಾಮುಂಡೇಶ್ವರಿ, ದುರ್ಗೆ, ಬನಶಂಕರಿ ಎಂದು ಮೊದಲಾದ ನಾಮಾವಳಿಗಳಿಂದ ಸ್ತುತಿಸಲಾಗುವ ದೇವಿ ನವರಾತ್ರಿಯ ಒಂಬತ್ತನೇ ದಿನದಂದು ಸಂಹರಿಸಿ ಲೋಕಕ್ಕೆ ಶಾಂತಿಯನ್ನು ತಂದಳೆಂಬ ನಂಬಿಕೆಯ ದ್ಯೋತಕವಾಗಿ ಅಂದು ಆಯುಧ ಪೂಜೆ ಮಾಡಲಾಗುತ್ತದೆ.

ದ್ವಾಪರ ಯುಗದಲ್ಲಿ ಪಾಂಡವರು ಹದಿಮೂರು ವರ್ಷಗಳ ವನವಾಸ ಮುಗಿಸಿ ಒಂದು ವರ್ಷ ಅಜ್ಞಾತವಾಸ ಮುಗಿಸಿದ ದಿನವೇ ವಿಜಯದಶಮಿ. ಅಜ್ಞಾತವಾಸದ ಸಮಯದಲ್ಲಿ ಬನ್ನಿ ಗಿಡದಲ್ಲಿ ಬಚ್ಚಿಟ್ಟಿದ್ದ ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲ ತೆಗೆದು ವಿರಾಟರಾಜನ ಶತ್ರುಗಳ ವಿರುದ್ಧ ಪಾಂಡವರು ವಿಜಯವನ್ನು ಸಾಧಿಸುತ್ತಾರೆ. ನವರಾತ್ರಿ ಹಬ್ಬ ಮುಗಿಸಿ ದಶಮಿಯಂದು ಸಾಧಿಸಿದ ವಿಜಯದ ಕುರುಹಾಗಿ ಕೂಡ ಆಯುಧ ಪೂಜೆಯನ್ನು ಆಚರಿಸಲಾಗುತ್ತದೆ. ವಿಜಯದಶಮಿ ಹಬ್ಬದ ದ್ಯೋತಕವಾಗಿ ಮನೆ ಮನೆಗಳಲ್ಲಿ ನೆಂಟರಿಷ್ಟರು ಬನ್ನಿ ಎಲೆಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಸಂತಸ ಪಡುತ್ತಾರೆ.

**ರಾಜ್ಯೋತ್ಸವ (ನವೆಂಬರ್ 1):** ಮೈಸೂರು ರಾಜ್ಯವು (ಈಗಿನ ಕರ್ನಾಟಕ) 1956ರ ನವೆಂಬರ್ 1ರಂದು ಉದಯಿಸಿದರ ಸಂಕೇತವಾಗಿ ಆಚರಿಸುವ ದಿನವೇ ರಾಜ್ಯೋತ್ಸವ. ಕನ್ನಡದ ಕುಲಪುರೋಹಿತರಾದ ಆಲೂರು ವೆಂಕಟರಾವ್ ಕರ್ನಾಟಕ ಏಕೀಕರಣ ಚಳವಳಿಯನ್ನು 1905ರಲ್ಲಿ ಪ್ರಾರಂಭಿಸಿದರು. 1950ರಲ್ಲಿ ಭಾರತವು ಗಣರಾಜ್ಯವಾದ ನಂತರ ಭಾರತದ ವಿವಿಧ ಪ್ರಾಂತ್ಯಗಳು, ಭಾಷೆಯ ಆಧಾರದ ಮೇಲೆ ರಾಜ್ಯಗಳಾಗಿ ರೂಪುಗೊಂಡವು. ಈ ಹಿಂದೆ ರಾಜರ ಆಳ್ವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಹಲವಾರು ಸಂಸ್ಥಾನಗಳನ್ನು ಒಳಗೊಂಡಂತೆ ರಾಜ್ಯಗಳು ರೂಪುಗೊಂಡಿದ್ದವು. ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ ಮೈಸೂರು ರಾಜ್ಯ ಉದಯವಾಯಿತು.



1956ರ ನವೆಂಬರ್ 1ರಂದು ಮದ್ರಾಸ್, ಬಾಂಬೆ, ಹೈದ್ರಾಬಾದ್ ಪ್ರಾಂತ್ಯದ ಕನ್ನಡ ಮಾತನಾಡುವ ಪ್ರದೇಶಗಳು ವಿಲೀನಗೊಂಡು ಮೈಸೂರು ರಾಜ್ಯದ ಉದಯವಾಯಿತು. ಹಾಗೂ ಉತ್ತರ ಕರ್ನಾಟಕ, ಮಲೆನಾಡು (ಕೆನರಾ) ಮತ್ತು ಹಳೆಯ ಮೈಸೂರು ಎಂಬುದಾಗಿ ಹೊಸದಾಗಿ ರೂಪುಗೊಂಡ ಮೈಸೂರು ರಾಜ್ಯವನ್ನು ಮೂರು ಪ್ರದೇಶಗಳಲ್ಲಿ ಗುರುತಿಸಲಾಯಿತು. ಇದರ ಪ್ರತೀಕವಾಗಿ ಆಚರಿಸುವ ರಾಜ್ಯೋತ್ಸವದಂದು ಎಲ್ಲೆಡೆ ಕನ್ನಡ ಬಾವುಟ ರಾರಾಜಿಸುತ್ತದೆ.

**ಕ್ರಿಸ್ಮಸ್ (ಡಿಸೆಂಬರ್ 25):** ಕ್ರೈಸ್ತರ ಆರಾಧ್ಯದೈವ ಯೇಸುಕ್ರಿಸ್ತನ ಜನುಮದಿನವೇ ಕ್ರಿಸ್ಮಸ್. ಪ್ರತಿವರ್ಷ ಡಿಸೆಂಬರ್ 25ರಂದು ಆಚರಿಸಲಾಗುತ್ತದೆ. ಬ್ರಿಟಿಷ್ ಆಳ್ವಿಕೆಯ ಪೂರ್ವದಿಂದಲೂ ಭಾಷಾ ಪ್ರಾಂತ್ಯಗಳ ವೈವಿಧ್ಯ, ವಿಭಿನ್ನತೆಗಳಲ್ಲೂ ಸಾಂಪ್ರದಾಯಿಕವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ.



ಮುಖ್ಯವಾಗಿ ಈ ಹಬ್ಬದಲ್ಲಿ ಕ್ರೈಸ್ತರು ಮನೆಗಳಿಗೆ ಬಣ್ಣ, ವಿದ್ಯುದೀಪಗಳಿಂದ ಅಲಂಕರಿಸುವುದಲ್ಲದೇ ಕ್ರಿಸ್ಮಸ್ ಟ್ರೀ, ಬಲೂನ್, ಸಾಂಟಾ ಕ್ಲಾಸ್, ಗ್ರೀಟಿಂಗ್ ಕಾರ್ಡಿನಿಂದ ಮೆರುಗು ನೀಡುತ್ತಾರೆ. ಅಲ್ಲದೇ, ಯೇಸುವಿನ ಜನನ ಸಾರುವ ನಕ್ಷತ್ರದ ಆಕೃತಿ ವಿಶೇಷಗಳು ಸಾಮಾನ್ಯವಾಗಿ ಎಲ್ಲರ ಮನೆಯ ಮುಂದೆ ಕಂಗೊಳಿಸುತ್ತವೆ. ಕ್ರಿಸ್ಮಸ್ ಆಚರಣೆಯಲ್ಲಿ ಕೇಕ್‌ಗೆ ಹೆಚ್ಚು ಪ್ರಾಧಾನ್ಯ. ಇದರ ಜತೆಗೆ ಇನ್ನಿತರ ಭಾರತೀಯ ಸಿಹಿ ತಿಂಡಿಗಳು ಮತ್ತು ಮಾಂಸಾಹಾರಿ ಖಾದ್ಯಗಳು ಪ್ರಾಮುಖ್ಯತೆ ಪಡೆದಿವೆ. ಈ ಹಬ್ಬದಲ್ಲಿ ಕ್ರೈಸ್ತರ ಉತ್ಸಾಹ ಇಮ್ಮಡಿಗೊಳಿಸುವುದು ಕ್ರಿಸ್ಮಸ್ ಸಂಗೀತ. ಕ್ರಿಸ್ಮಸ್ ಗೀತೆಗಳ (ಕ್ಯಾರಲ್ಸ್) ಮತ್ತು ನಾಟಕಗಳು.

ಈ ಸಂದರ್ಭದಲ್ಲಿ ಪ್ರತಿ ಚರ್ಚ್‌ಗಳನ್ನು ಸಹ ಆಯಾ ಪ್ರಾಂತ್ಯದ ಸಾಂಪ್ರದಾಯಿಕ ರೀತಿಗನುಗುಣವಾಗಿ ಶೃಂಗರಿಸಲಾಗುತ್ತದೆ. ಕ್ರಿಸ್ಮಸ್ ದಿನ ಚರ್ಚ್‌ಗಳಲ್ಲಿ ಮಧ್ಯರಾತ್ರಿ ಆರಾಧನೆ ಸರ್ವಸಾಮಾನ್ಯ. ಆರಾಧನೆಯಲ್ಲಿ ಪ್ರಮುಖವಾಗಿ ಯೇಸುಕ್ರಿಸ್ತನ ಜನನದ ಕುರಿತಾದ ಸಂಗೀತ ಮತ್ತು ಪಾದ್ರಿಯ ವಿಶೇಷ ಕ್ರಿಸ್ಮಸ್ ಸಂದೇಶ ಜನರ ಭಾವನೆಗಳ ಮೇಲೆ ಮತ್ತು ಅವರ ಜೀವನದ ಮೇಲೆ ಪರಿಣಾಮ ಬೀರುವಂಥದ್ದು. ಪ್ರತಿಯೊಬ್ಬ ಭಾರತೀಯ ಕ್ರೈಸ್ತನೂ ಅಂದು ಹೊಸಬಟ್ಟೆ ತೊಟ್ಟು ಆರಾಧನೆಯಲ್ಲಿ ಪಾಲ್ಗೊಳ್ಳುವುದು ವಾಡಿಕೆ.



## ಹುಟ್ಟುಹಬ್ಬದ ಶುಭಾಶಯಗಳು

2015ನೇ ವರ್ಷದ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು/ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

**-ಸಂಪಾದಕೀಯ ಮಂಡಳಿ.**

## ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2015ನೇ ವರ್ಷದ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಶುಭಾಶಯಗಳು. **-ಸಂಪಾದಕೀಯ ಮಂಡಳಿ.**

# 2014-15ನೇ ಸಾಲಿನ ರಾಜ್ಯಮಟ್ಟದ ಅಂತರ್ ವಿದ್ಯುತ್ ಕಂಪನಿಗಳ ಕ್ರೀಡಾಕೂಟದ ಕೆಲ ಚಿತ್ರಗಳು














ಸುದ್ದಿ ಸಾರವಾಗಿ
ಸಲಹೆ ಸಂದೇಶವಾಗಿ
ಸುದ್ದಿಸಾರಗಳ ತರಂಗವಾಗಿ
ಸುರಕ್ಷತೆ ಅದ್ಯತೆಯಾಗಿ
ಜೊತೆಗಿರಲಿ ಬೆಸ್ಕಾಂ ಸ್ನೇಹಿಯಾಗಿ
ಉತ್ಪಾದನೆಯ ಸವಾಲುಗಳಾಗಿ
ಷರತ್ತುಗಳಿಗೆ ಬದ್ಧವಾಗಿ
ರಾಷ್ಟ್ರಗಳಿಗೆ ಮಾದರಿಯಾಗಿ
ಮಾಹಿತಿಯ ಸರಮಾಲೆಯಾಗಿ
ಜೊತೆಗಿರಲಿ ಬೆಸ್ಕಾಂ ಸ್ನೇಹಿಯಾಗಿ
ಕಾಣದೇ ಹರಿಯುವ ಸರಾಗವಾಗಿ
ಕಂಡಾಗ ಹೊಳೆಯುವ ಬೆಳಕಾಗಿ
ರಾಷ್ಟ್ರದ ಹೇಳಿಕೆಗೆ ದೀಪವಾಗಿ
ಬೆಸ್ಕಾಂ ನೌಕರರ ಜೊತೆಯಾಗಿ
ಜೊತೆಗಿರಲಿ ಬೆಸ್ಕಾಂ ಸ್ನೇಹಿಯಾಗಿ

**-ಶ್ರೀಮತಿ ಆರ್. ಜಯಂತಿ**
ಕಿರಿಯ ಇಂಜಿನಿಯರ್,
ಗ್ರಾಮೀಣ ಉಪವಿಭಾಗ ಬೆಸ್ಕಾಂ ತುಮಕೂರು.








## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಂಕಜ್‌ಕುಮಾರ್ ಪಾಂಡೆ,** ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಎಚ್. ನಾಗೇಶ್,** ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀ ಬಿ.ಎಲ್. ಗುರುಪ್ರಸಾದ್,** ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀಮತಿ ಗೀತಾ ಚೌಹ್ಹಾಣ್,** ಸಾರ್ವಜನಿಕ ಸಂಪರ್ಕ ಅಧಿಕಾರಿ | **ಸಂಚಾಲಕರು** |
| **ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಆರ್.ಎಚ್. ಲಕ್ಷ್ಮೀಪತಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ಎನ್. ಪ್ರಕಾಶ್ ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ದಾಸ್‌ಪ್ರಕಾಶ್,** ಕವಿಪ್ರನಿನಿ ಪ. ಜಾತಿ ಮತ್ತು ಪ. ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಹೆಸ್ಕಾಂಗಳ ಪ.ಜಾತಿ ಮತ್ತು ಪ.ಪಂಗಡ ಅಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ.ಸಂಘ | **ಸದಸ್ಯರು** |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ:


**ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಾರ್ಯಾಲಯ, ನೆಲಮಹಡಿ, ಬಿ. ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **bescommagazine@gmail.com**


**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**

Printed at Shubhodaya Printers, Mob: 99452 77806